ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:1251/2021

ಚಾಸಾ:8 ಪ್ರಾಸಾ:8

ದಿನಾಂಕ: 23.08.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ವಸಂತ ರಾವ್ |
| ತಂದೆಯ ಹೆಸರು | : | ವಾಸುದೇವ ರಾವ್ |
| ವಯಸ್ಸು | : | 64 ವರ್ಷ |
| ಉದ್ಯೋಗ | : | ಮನೆಯಲ್ಲಿ ಇರುವುದು |
| ವಾಸ ಸ್ಥಳ | : | ಉಡುಪಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ಆರೋಪಿಯನ್ನು ನೋಡಿ ಪರಿಚಯವಿದೆ. ಕೆಎ-20-ಡಿ-7017 ಎ ಪಿ ಎಂ ಬಸ್ಸಿನ ಜಿಪಿಎದಾರನಾಗಿರುತ್ತೇನೆ.

ಸಾಕ್ಷಿಯು ಕಲಂ ದಿ: 20-02-2021ರ ಸ್ವತ್ತು ಸ್ವಾಧೀನತಾ ಮಹಜರು, 133ರಡಿಯ ನೋಟೀಸು, ಉತ್ತರ ಹಾಗೂ ಇಂಡಿಮಿನಿಟಿ ಬಾಂಡನ್ನು ನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-13 ರಿಂದ 16 ಎಂದು, ಅವುಗಳಲ್ಲಿನ ಸಾಕ್ಷಿಯ ಸಹಿಗಳನ್ನು ನಿಪಿ-13(ಎ) ರಿಂದ 16(ಎ) ಎಂದು ಗುರುತಿಸಲಾಯಿತು. ಸದ್ರಿ ದಾಖಲೆಗಳಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಸದ್ರಿ ಸಹಿಗಳನ್ನು ಠಾಣೆಯಲ್ಲಿಮಾಡಿರುತ್ತೇನೆ. ಸಾಕ್ಷಿ ನಿಪಿ-8 ರ ಪೋಟೋ ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ಮಾನ್ಯ ಸ.ಸ.ಅ.ರವರಿಂದ:**

ದಿ: 18-02-2021 ರಂದು ಮೇಲೆ ಗುರುತಿಸಿದ ಬಸ್ಸನ್ನು ನ್ಯಾಯಾಲಯದ ಮುಂದೆ ಇರುವ ಆರೋಪಿ ಅತೀ ವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿಕೊಂಡು ನಿಲಕ್ಷ್ಯತನದಿಂದ ಅಪಘಾತಪಡಿಸಿದ್ದು, ಅದರ ಪರಿಣಾಮ ಪ್ರವೀಣ್ ಎಂಬುವರು ತೀವ್ರವಾಗಿ ಗಾಯಗೊಂಡು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದು ಈ ಹಿನ್ನೆಲೆಯಲ್ಲಿ ನನ್ನ ವಾಹನವನ್ನು ಪೊಲೀಸರು ವಶಕ್ಕೆ ಪಡೆದಿದ್ದು

ನಿಪಿ-14 ರಂತೆ ತಿಳುವಳಿಕೆ ಹೊರಡಿಸಿ ಅದಕ್ಕೆ ನಾನು ನಿಪಿ-15 ರಂತೆ ಉತ್ತರವನ್ನು ನೀಡಿ ನಿಪಿ-16 ರಂತೆ ಇಂಡಿಮಿನಿಟಿ ಬಾಂಡ್ ನ್ನು ಹಾಜರುಪಡಿಸಿ ವಾಹನವನ್ನು ಬಿಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ದಿಃ 20-02-2021 ರಂದು ಪೊಲೀಸರು ಸದ್ರಿ ಬಸ್ಸನ್ನು ವಶಕ್ಕೆ ಪಡೆಯುವ ವೇಳೆಗೆ ನಾನು ಹಾಜರು ಇದ್ದು ಬೆಳಗ್ಗೆ 10 ರಿಂದ 10-30ರವೆರಗೂ ಕ್ರಮವನ್ನು ಜರುಗಿಸಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ಎಲ್ಲಾ ವಿಚಾರಗಳು ನನಗೆ ತಿಳಿದಿದ್ದರೂ ಆರೋಪಿ ನನ್ನ ಪರಿಚಯಸ್ಥನಾದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ವಾಟೀ ಸವಾಲುಃ ಆರೋಪಿತರ ಪರ ವಕೀಲರು ವಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**